<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್</u>

<u>ಸಿ. ಸಿ. ನಂ.**801/2024**</u>

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಚೌಡಪ್ಪ ಜಡೆ | ಪಿಡಬ್ಲ್ಯೂ | **5** |
| ತಂದೆ:ಗಂಡನ ಹೆಸರು | : | ಬಂಗಾರಪ್ಪ | ಸಿಡಬ್ಲ್ಯೂ | **5** |
| ವಯಸ್ಸು | : | 45 ವರ್ಷ | | |
| ಉದ್ಯೋಗ | : | ಕೂಲಿಕೆಲಸ | | |
| ವಾಸಸ್ಥಳ | : | ಮಂತಗಿ | | |

<u>ದಿನಾಂಕ **13.02.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ</u>

2023 ನೇ ಸಾಲಿನಲ್ಲಿ ನಾವು ಕೆ ಎಸ್ ಆರ್ ಟಿ ಬಸ್ ನಲ್ಲಿ ಮಂತಗಿಯಿಂದ ಹಾನಗಲ್ ಗೆ ಬರುತ್ತಿದ್ದೆ. ಹಾನಗಲ್ ಗೆ ಬಂದಾಗ 9.30 ಆಗಿತ್ತು. ಚಾಸಾ-4 ರವರು ಹಳೆ ಬಸ್ ನಿಲ್ದಾಣದಲ್ಲಿ ಇಳಿದು ಹೋಗುತ್ತಿದ್ದರು. ಬಸ್ ಚಾಲಕ ಎದ್ವಾ ತದ್ವಾ ಹೊಡೆದುಕೊಂಡು ಬಂದು ಚಾಸಾ-4 ರವರಿಗೆ ಡಿಕ್ಕಿಪಡಿಸಿದರು. ಆಗ ಚಾಸಾ-4 ರವರು ಕೆಳಗೆ ಬಿದ್ದರು. ಬಸ್ ನ ಗಾಲಿ ಚಾಸಾ-4 ರವರ ಕಾಲಿನ ಮೇಲೆ ಹತ್ತಿತು. ಕಾಲು ಪುಡಿ ಪುಡಿ ಆಯಿತು. ನಾನು, ಜಗದೀಶ ಅವರನ್ನು ನೋಡಿದೆವು. ಜಗದೀಶ ಚಾಸಾ-4 ರವರ ಮಗನಿಗೆ ಪೋನ್ ಮಾಡಿದರು. ಆ್ಯಂಬುಲೆನ್ಸ್ ಬಂದ ನಂತರ ನಾನು ಅವರನ್ನು ಹಾಕಿ ಹೋದೆನು. ಚಾಸಾ-4 ರವರನ್ನು ಹಾನಗಲ್ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅಲ್ಲಿಂದ ಆ್ಯಂಬುಲೆನ್ಸ್ ನಲ್ಲಿ ಶಿರಸಿ ಗೆ ಕರೆದುಕೊಂಡು ಹೋದರು. ಶಿರಸಿ ಆಸ್ಪತ್ರೆಯವರು ಮಂಗಳೂರು ಹೆಗಡೆ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಮಾರನೇ ದಿನ ನಮ್ಮನ್ನು ಪಂಚನಾಮೆಗೆ ಕರೆದರು. ಅಲ್ಲಿ ಹಳೆ ಬಸ್ ನಿಲ್ದಾಣ ಹತ್ತಿರ ಬಸ್ ನಿಲ್ಲಿಸಿದ್ದರು. ನಮ್ಮ ವಿಚಾರಿಸಿದರು. ಆಗ ನಾನು, ಜಗದೀಶ ಇದ್ದೆವು. ಪೋಲಿಸರು ಬಂದಿದ್ದರು. ಚಾಸಾ-2 ಮತ್ತು ಇನ್ನೊಬ್ಬರು ಸಹ ಇದ್ದರು. ಚಾಸಾ-2 ಮತ್ತು ಇನ್ನೊಬ್ಬರನ್ನು ಜಗದೀಶ ಕರೆದಿದ್ದರು. ಅಲ್ಲಿ ಪೊಟೋ ಹೊಡೆದು ಟೈಪ್ ಮಾಡಿದರು. ಪೋಲಿಸರು ಹೀಗೆ ಹೇಳಬೇಕು ಅಂತಾ ನಮಗೆ ಹೇಳಿದರು ಆ ಪ್ರಕಾರ ಹೇಳಿದೆವು, ಆ ಮೇಲೆ ಬರೆದುಕೊಂಡರು. ಜಾಗ ನಾವೇ ತೋರಿಸಿರುತ್ತೇವೆ. 9.00 ರಿಂದ 10.00 ಗಂಟೆಯವರೆಗೆ ಬರೆದುಕೊಂಡರು. ಅಲ್ಲಿನಮ್ಮನ್ನು ನಿಲ್ಲಿಸಿ ಪೊಟೋ ತೆಗೆದರು. ಅಲ್ಲಿಂದ

ಠಾಣೆಗೆ ಕರೆದುಕೊಂಡು ಬಂದರು. ಕೆ ಎಸ್ ಆರ್ ಟಿ ಸಿ ಬಸ್ ನಂ. ಕೆಎ-27 ಎಫ್-509 ಇತ್ತು. ಹಸಿರು ಬಣ್ಣದ ಬಸ್ ಇತ್ತು. ಬಸ್ ನ್ನು ನಾವೇ ತೋರಿಸಿರುತ್ತೇವೆ. ಈ ಕುರಿತು ಹೇಳಿಕೆ ನೀಡಿದ್ದೇನೆ.ಬಸ್ ಚಾಲಕನ ಹೆಸರು ವಿಚಾರಿಸಿದಾಗ ಆತನ ಹೆಸರು ಪರಸಪ್ಪ ವಾಲೀಕಾರ ಅಂತಾ ತಿಳಿಸಿದರು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಗುರುತಿಸುತ್ತಾರೆ. ಬಸ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪೊಟೋದಲ್ಲಿ ಬಸ್ ನ್ನು ನೋಡಿ ಗುರುತಿಸುತ್ತಾರೆ. ಪೊಟೋವನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದೆ.

ಪೊಟೋವನ್ನು ನಿಪಿ-4 ಎಂದು ಈಗಾಗಲೇ ಗುರುತಿಸಲಾಗಿದೆ. ಜಪ್ತಿ ಪಂಚನಾಮೆಯನುನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು ಸಾಕ್ಷಿ ಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಕೆ ವಕೀಲರಿಂದಃ

ಚಾಸಾ-4 ನನ್ನ ಸಂಬಂಧಿ ಅಲ್ಲ. ಆ ದಿನ ನಾನು ಬಸ್ ನಲ್ಲಿ ಪ್ರಯಾಣ ಮಾಡಿದ ಬಗ್ಗೆಟಿಕೇಟ್ ಹಾಜರುಪಡಿಸಿಲ್ಲ. ನಾನು ಆ ದಿನ ಬಸ್ ನಲ್ಲಿ ಪ್ರಯಾಣ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಂತಗಿಯಿಂದ ಬಸ್ ಹತ್ತಿದ್ದೆ. ಬಸ್ ನಲ್ಲಿ ಎಷ್ಟು ಜನ ಇದ್ದರು ಹೇಳಲು ಬರುವುದಿಲ್ಲ. ಬೆಳಗಿನ ಜಾವದ ಬಸ್ ಆಗಿದ್ದರಿಂದ ಎಲ್ಲಾ ಶಾಲಾ ಕಾಲೇಜು ಮಕ್ಕಳು, ಸಾರ್ವಜನಿಕರು, ಕೆಲಸಕ್ಕೆ ಹೋಗುವವರು ಆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಶಕ್ತಿಯೋಜನೆ ಅಡಿ ಸಾಕಷ್ಟು ಮಹಿಳೆಯರು ಇದ್ದರು ಎಂದರೆ ಸರಿ. ನಾನು ಬಸ್ ನ ಹಿಂದಿನ ಶೀಟಿನಲ್ಲಿ ಕುಳಿತಿದ್ದೆ. ಬಸ್ ನಲ್ಲಿ ನೂರಾರು ಜನ ತುಂಬಿದ್ದರು ಎಂದರೆ ಸರಿಯಲ್ಲ. ಬಸ್ ನಲ್ಲಿ ನೂರಾರು ಜನ ಇದ್ದುದ್ದರಿಂದ ನಾನು ಹಿಂದಿನ ಶೀಟಿನಲ್ಲಿ ಕುಳಿತಿದ್ದರಿಂದ ಮುಂದುಗಡೆ ಏನಾಗುತ್ತದೆ ಅಂತಾ ಕಾಣುವುದಿಲ್ಲ ಎಂದರೆ ಸರಿಯಲ್ಲ.

ಬಸ್ ನಿಲ್ದಾಣದ ಚಕಬಂದಿ ಹೇಳಲು ಬರುವುದಿಲ್ಲ. ಬಸ್ ಯಾವ ದಿಕ್ಕಿಗೆ ಮುಖ ಮಾಡಿ ನಿಂತಿತ್ತು ಹೇಳಲು ಬರುವುದಿಲ್ಲ. ಹಳೆ ಬಸ್ ನಿಲ್ದಾಣದಲ್ಲಿ ಸಾಕಷ್ಟು ಅಂಗಡಿಗಳಿವೆ ಎಂದರೆ ಸರಿ. ನಾನು ಸೈಕಲ ಮೊಟಾರ್ ಓಡಿಸುವುದಿಲ್ಲ. ನನಗೆ ಡ್ರೈವಿಂಗ್ ಲೈಸೆನ್ಸ ಸಹ ಇಲ್ಲ. ಹಳೆ ಬಸ್ ನಿಲ್ದಾಣದಲ್ಲಿ ಬಸ್ ನಿಂತಿತ್ತು ಎಂದರೆ ಸರಿ. ಆ ದಿನಮಳೆ ಬರುತ್ತಿತ್ತು ಎಂದರೆ ಸರಿಯಲ್ಲ. 2 ದಿನ ಮುಂಚೆ ಮಳೆಯಾಗಿತ್ತು. ಆ ದಿನ ಮಳೆ ಬರುತ್ತಿದ್ದರೂ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ಕಚೇರಿಗೆ ಹೋಗುವ ಅವಸರದಿಂದ ತಾವೇ ಬಿದ್ದು ಗಾಯಗೊಂಡರು ಎಂದರೆ ಸರಿಯಲ್ಲ. ಚಾಸಾ-4 ಇಳಿದು 10 ಅಡಿ ಮುಂದೆ ಹೋದ ಮೇಲೆ ಬಸ್ ಚಾಲೂ ಆಯಿತು, ಚಾಲಕ ಎಕ್ಸಲೇಟರ್ ಕೊಟ್ಟನು. ನಾನು ಹಿಂದೆ ಕುಳಿತಿದ್ದರಿಂದ ಮುಂದೆ ಚಾಲಕನದು ಏನು ಕಾಣುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನವರಿಗೆ

ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ನಮ್ಮ ಊರಿನವರು ಮತ್ತು ಪೋಲಿಸರು ಪಂಚನಾಮೆಗೆ ಕರೆದರು. ಜಗದೀಶ, ನಾಗೇಶ ಕರೆದರು. ಹೇಳಿಕೆಯನ್ನು ಮಾರನೇ ದಿನ ನೀಡಿದ್ದೇನೆ. ಪಂಚನಾಮೆ ಕಾಲಕ್ಕೆ ಬಸ್ ರಸ್ತೆ ಎಡಬದಿಗೆ ಇತ್ತು. ರಸ್ತೆ ಎಷ್ಟು ಅಗಲ ಇದೆ ಹೇಳಲು ಬರುವುದಿಲ್ಲ. ಬಸ್ ನಿಂತ ಸ್ಥಳದ ಚಕಬಂದಿ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲೂ ಸಹ ಈ ಮೇಲೆ ಹೇಳಿದ ವಿಷಯ ಹೇಳಿಲ್ಲ ಎಂದರೆ ಸರಿ. ಪೋಲಿಸರು ನನ್ನ ಸಹಿ ಬಿಳಿ ಹಾಳೆ ಮೇಲೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಪೋಲಿಸರು ಏನು ಬರೆದಿದ್ದಾರೆ ಅಂತಾ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ನಮ್ಮ ಊರಿನವರು ಇದ್ದುದ್ದರಿಂದ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಪಂಚನಾಮೆ ಕಾಲಕ್ಕೆ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ.ಈ ಘಟನೆಗೂ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್